[2020] 7 ಎಸ್. ಸಿ. ಆರ್ 1148

ಶ್ರೀ ವಿ. ಎನ್. ಕೃಷ್ಣ ಮೂರ್ತಿ ಮತ್ತು ಇತರರು

ವಿರುದ್ಧ

ಶ್ರೀ ರವಿಕುಮಾರ್ ಮತ್ತು ಇತರರು.

(2020ರ ಸಿವಿಲ್ ಮೇಲ್ಮನವಿ ಸಂಖ್ಯೆ 2701/2020 ರಿಂದ 2704/2020)

ಆಗಸ್ಟ್ 21, 2020

[ಎಲ್. ನಾಗೇಶ್ವರ ರಾವ್, ಕೃಷ್ಣ ಮುರಾರಿ ಮತ್ತು ಎಸ್. ರವೀಂದ್ರ ಭಟ್,
ನ್ಯಾಯಾಧೀಶರು.]

ಸಿವಿಲ್ ಪ್ರಕ್ರಿಯಾ ಸಂಹಿತೆ, 1908- 'ಸರ್ವರಿಗೂ ಅನ್ವಯಿಸುವ ತೀರ್ಪು' '; 'ಬಾಧಿತ ಪಕ್ಷಕಾರ' - ಯಾವಾಗ ಆಗುವದಿಲ್ಲ - ವಿವಾದದಲ್ಲಿರುವ ಭೂಮಿಯ ಮಾಲೀಕರು ಸೊಸೈಟಿಗೆ ಜಮೀನನ್ನು ಮಾರಾಟ ಮಾಡಲು ಕರಾರು ಪತ್ರ ಬರೆದು ಕೊಟ್ಟರು - ಸೊಸೈಟಿಯ ಪದಾಧಿಕಾರಿಗಳಿಗೆ ತಮ್ಮ ಪರವಾಗಿ ಆಸ್ತಿಗೆ ಸಂಬಂಧಿಸಿದಂತೆ ಆಸ್ತಿ ಮಾರಾಟ ವಹಿವಾಟು ನಡೆಸಲು ಅವರಿಗೆ ಅಧಿಕಾರ ನೀಡುವ ಸಲುವಾಗಿ ಒಂದು ಜನರಲ್ ಪವರ್ ಆಫ್ ಅಟಾರ್ನಿ ಸಹ ಬರೆದುಕೊಟ್ಟರು - ಆಸ್ತಿಗೆ ಸಂಬಂಧಿಸಿದಂತೆ ಮೇಲ್ಮನವಿದಾರರಿಗೆ ಮಾರಾಟ ಪತ್ರ ಬರದುಕೊಡಲಾಯಿತು - ಆಸ್ತಿಯ ಸಹ-ಮಾಲೀಕರು ಎಂದು ಹೇಳಿಕೊಳ್ಳುವ ಪ್ರತಿವಾದಿಗಳು ಮಾರಾಟ ಒಪ್ಪಂದ ಪತ್ರವನ್ನು ರದ್ದುಗೊಳಿಸುವಂತೆ ಕೋರಿ ಇತರ ವಿಷಯಗಳ ಸಹಿತ ದಾವೆ ಹೂಡಿದರು - ದಾವೆಯನ್ನು ಡಿಕ್ರಿ ಮಾಡಲಾಯಿತು - ಮೇಲ್ಮನವಿದಾರರು ಡಿಕ್ರೀ ವಿರುದ್ಧ ಮೇಲ್ಮನವಿ ಸಲ್ಲಿಸಲು ನ್ಯಾಯಾಲಯದ ಅನುಮತಿಗೆ ವಿನಂತಿಸಿದರು . ಉಚ್ಚ ನ್ಯಾಯಾಲಯವು ಅನುಮತಿಸಲು ನಿರಾಕರಿಸಿತು.- ತೀರ್ಮಾನ: ದಾವೆಯಲ್ಲಿ ಕೇಳಿದ್ದ ಪರಿಹಾರ ಮಾರಾಟ ಮಾಡಲು ಆಗಿರುವ ಕರಾರು ಪತ್ರದ ರದ್ದು ಆದರೆ ಮೇಲ್ಮನವಿದಾರರ ಕ್ಲೇಮಿಗೆ ಆಧಾರವಾಗಿರುವ ಕ್ರಯಪತ್ರವನ್ನು ಜಿ ಪಿ ಎ ಕೆಳಗೆ ಪಡೆದುಕೊಂಡಿದ್ದ ಅಧಿಕಾರದ ಮೇಲೆ ಬರೆದುಕೊಡಲಾಗಿತ್ತು ಹಾಗು ಅದಕ್ಕೂ ದಾವೆ

ಹೂಡಲು ಆಧಾರ ಮಾಡಿಕೊಂಡಿರುವ ಕರಾರು ಪತ್ರಕ್ಕು ಸಂಬಂಧವಿರಲಿಲ್ಲ . ಕೆಳ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ಸರ್ವರಿಗೂ ಅನ್ವಯಿಸುವ ತೀರ್ಪು ಆಗಿರಲಿಲ್ಲ ಮತ್ತು ಅದು ಕೇವಲ ವಾದಿ ಮತ್ತು ಪ್ರತಿವಾದಿಗೆ ಮಾತ್ರ ಅನ್ವಯಿಸುವ ತೀರ್ಪು ಆಗಿತ್ತು ಮತ್ತು ಮೇಲ್ಮನವಿದಾರರ ಮೇಲೆ ಅನ್ವಯಿಸುವುದಿಲ್ಲ.- ಮೇಲ್ಮನವಿದಾರರು ಪ್ರಶ್ನಿತ ಆದೇಶದಿಂದ ಪೂರ್ವಭಾವಿಯಾಗಿ ಅಥವಾ ಪ್ರತಿಕೂಲವಾಗಿ ಡಿಕ್ರಿಯಿಂದ ಬಾದಿತರಾಗಿಲ್ಲ ಅಥವಾ ಅವರ ಯಾವುದೇ ಕಾನೂನುಬದ್ಧ ಹಕ್ಕುಗಳ ಉಲ್ಲಂಘನೆಯಾಗಿ ಅವರನ್ನು ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ಅರ್ಹವಾದ 'ಬಾಧಿತ ವ್ಯಕ್ತಿ' ಯ ವ್ಯಾಪ್ತಿಯೊಳಗೆ ತರುವ ಅಪಾಯಕ್ಕೆ ಸಿಲುಕಿಸಲಿಲ್ಲ - ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಯಾವುದೇ ದುರ್ಬಲತೆ ಇಲ್ಲ.

ಪದಗಳು ಮತ್ತು ಅಭಿವ್ಯಕ್ತಿಗಳು - ತೀರ್ಪು ಮತ್ತು ಡಿಕ್ರೀ ಸಂದರ್ಭದ ಹಿನ್ನೆಲೆಯಲ್ಲಿ 'ಬಾಧಿತ ವ್ಯಕ್ತಿ', ಯ ಅರ್ಥ - ಚರ್ಚಿಸಲಾಗಿದೆ - ಸಿವಿಲ್ ಪ್ರಕ್ರಿಯಾ ಸಂಹಿತೆ , 1908.

ನಾಗರಿಕ ಪ್ರಕ್ರಿಯಾ ಸಂಹಿತೆ, 1908- ಕಲಂ 96 ಮತ್ತು 100 - ವ್ಯಾಪ್ತಿ- ಚರ್ಚಿಸಲಾಗಿದೆ.

ಮೇಲ್ಮನವಿಗಳನ್ನು ತಿರಸ್ಕರಿಸಿದ ನ್ಯಾಯಾಲಯದ ಆದೇಶ:

ತೀರ್ಮಾನ : 1.1 ಸಿವಿಲ್ ಪ್ರಕ್ರಿಯಾ ಸಂಹಿತೆ ಸೆಕ್ಷನ್ 96 ಮತ್ತು 100 ರಲ್ಲಿ ಯಾವುದೇ ಮೂಲ ಡಿಕ್ರಿಯ ಮೇಲೆ ಅಥವಾ ಮೇಲ್ಮನವಿಯಲ್ಲಿನ ಡಿಕ್ರಿಯ ಮೇಲೆ ಮೇಲ್ಮನವಿ ಸಲ್ಲಿಸಲು ಅವಕಾಶ ಮಾಡಿಕೊಡುತ್ತದೆ ಆದರೆ ಯಾವ ವ್ಯಕ್ತಿ ಮೇಲ್ಮನವಿ ಸಲ್ಲಿಸಬಹುದು ಎಂಬ ಬಗ್ಗೆ ಪಟ್ಟಿ ಮಾಡುವುದಾಗಲಿ ಅಥವಾ ವರ್ಗೀಕರಣ ಮಾಡಿಲ್ಲ. ಆದಾಗ್ಯೂ, ಅಪರಿಚಿತ ವ್ಯಕ್ತಿಯು ತಾನು ಬಾಧಿತ ವ್ಯಕ್ತಿಗಳ ವರ್ಗಕ್ಕೆ ಸೇರಿದವನು ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡದ ಹೊರತು ಯಾವುದೇ ವಿಚಾರಣೆಯಲ್ಲಿ ಮೇಲ್ಮನವಿ ಸಲ್ಲಿಸಲು ಅನುಮತಿ ನೀಡಲಾಗುವುದಿಲ್ಲ. ಒಂದು ಐತೀರ್ಪು ಮತ್ತು ಡಿಕ್ರಿ ವ್ಯವಹರಣೆಯಲ್ಲಿ ಪಕ್ಷಕಾರರಲ್ಲದ ವ್ಯಕ್ತಿ ಮೇಲೆ ಪ್ರತಿಕೂಲ

ಪರಿಣಾಮ ಬೀರುವಲ್ಲಿ ಮಾತ್ರ ಅವನು ಮೇಲ್ಮನವಿ ನ್ಯಾಯಾಲಯದ ಅನುಮತಿಯೊಂದಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು.[ಪುಟ15] [1154-ಇ-ಎಫ್]

1.2 ಮೇಲ್ಮನವಿದಾರರನ್ನು ಬಾಧಿತ ವ್ಯಕ್ತಿಗಳು ಎಂದೂ ಹೇಳುವುದಾಗಲಿ ಅಥವಾ ಅವರು ವಿಚಾರಣೆ ನ್ಯಾಯಾಲಯದ ಐತೀರ್ಪು ಮತ್ತು ಡಿಕ್ರಿಗಾಗಲಿ ಯಾವುದೇ ರೀತಿಯಲ್ಲಿಯೂ ಬದ್ಧರಾಗಿರುವುದಿಲ್ಲ. ದಾವೆಯಲ್ಲಿ ಹೇಳಲಾದ ಪರಿಹಾರವೆಂದರೆ ಮಾರಾಟದ ಒಪ್ಪಂದವನ್ನು ರದ್ದುಗೊಳಿಸುವುದು. ಮೇಲ್ಮನವಿದಾರರ ಕ್ಲೈಮಿಗೆ ಆಧಾರವಾಗಿರುವ ಕ್ರಯಪತ್ರಗಳನ್ನು ಜಿ. ಪಿ. ಎ. ಆಧಾರದ ಮೇಲೆ ಬರೆದುಕೊಡಲಾಗಿತ್ತು ಮತ್ತು ಅದಕ್ಕೂ ದಾವೆ ಹೂಡಲು ಆಧರಿಸಿದ ಮಾರಾಟ ಕರಾರು ಪತ್ರಕ್ಕೂ ಯಾವುದೇ ಸಂಬಂಧವಿಲ್ಲ. ವಿಚಾರಣೆ ನ್ಯಾಯಾಲಯದ ಐತೀರ್ಪು ಮತ್ತು ಡಿಕ್ರಿಯು ಯಾವುದೇ ಅರ್ಥದಲ್ಲಿಯೂ ಸರ್ವರಿಗೂ ಅನ್ವಯಿಸುವ ತೀರ್ಪಲ್ಲ ಮತ್ತು ಅದು ದಾವೆಯ ವಾದಿಗಳು ಮತ್ತು ಪ್ರತಿವಾದಿಗಳನ್ನು ಮಾತ್ರ ಬದ್ಧರನ್ನಾಗಿ ಮಾಡುತ್ತದೆ ಹೊರತು ಮೇಲ್ಮನವಿದಾರರನ್ನಲ್ಲ. ಮಾರಾಟದ ಒಪ್ಪಂದಕ್ಕೆ ಸಂಬಂಧಿಸಿದಂತೆ ಕೋರಲಾದ ಘೋಷಣೆ ಪರಿಹಾರಕ್ಕೆ ಮಾತ್ರ ದಾವೆ ಸೀಮಿತವಾಗಿದೆ. ಪ್ರತಿವಾದಿ-ಸಂಘ ಮತ್ತು ಅದರ ಅಧಿಕಾರಿಗಳ ಹಾಗು ನಿಯೋಜನೆಗೊಂದವರ ವಿರುದ್ಧ ಮಾತ್ರ ತಡೆಯಾಜ್ಞೆ ಕೋರಲಾಗಿದೆ. ಮೇಲ್ಮನವಿದಾರರು, ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ನಿರ್ವಹಿಸಲು ಅವರಿಗೆ ಅರ್ಹತೆ ನೀಡುವ 'ಬಾಧಿತ ವ್ಯಕ್ತಿ' ಎಂಬ ಅಭಿವ್ಯಕ್ತಿಯ ವ್ಯಾಪ್ತಿಯೊಳಗೆ ತಮ್ಮನ್ನು ತರಲು, ಪ್ರಸ್ತುತ ಐತೀರ್ಪುದಿಂದ ತಾವು ಪೂರ್ವಗ್ರಹದಿಂದ ಅಥವಾ ಪ್ರತಿಕೂಲವಾಗಿ ಪ್ರಭಾವಿತರಾಗಿದ್ದೇವೆ ಅಥವಾ ತಮ್ಮ ಯಾವುದೇ ಕಾನೂನುಬದ್ಧ ಹಕ್ಕುಗಳು ಅಪಾಯಕ್ಕೆ ಸಿಲುಕಿವೆ ಎಂಬುದನ್ನು ತೋರಿಸಲು ವಿಫಲರಾಗಿದ್ದಾರೆ. [ಪುಟಗಳು 21-23] [1156-D-G; 1157-A-C]

ಶ್ರೀಮತಿ. ಜತನ್ ಕುಮಾರ್ ಗೋಲ್ಛಾ ವರ್ಸಸ್ ಗೋಲ್ಛಾ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ (1970) 3 ಎಸ್. ಸಿ. ಸಿ 573; [1971] 3 ಎಸ್. ಸಿ. ಆರ್ 247; ಪಂಜಾಬ್ ರಾಜ್ಯ ಮತ್ತು ಇತರರು . ವಿ.ಅಮರ್ ಸಿಂಗ್ ಮತ್ತು ಮತ್ತೊಬ್ಬರು. (1974) 2 ಎಸ್ಸಿಸಿ 70: [1974] 3 ಎಸ್. ಸಿ. ಆರ್ 152; ಬಲ್ದೇವ್ ಸಿಂಗ್ ವರ್ಸಸ್ ಸುರಿಂದರ್

ಮೋಹನ್ ಶರ್ಮಾ ಮತ್ತು ಇತರರು. (2003) 1 ಎಸ್ಸಿಸಿ 34:[2002] 4 ಪೂರಕ.ಎಸ್. ಸಿ. ಆರ್. 43; ಎ. ಸುಭಾಷ್ ಬಾಬು ವರ್ಸಸ್ ಸ್ಟೇಟ್ ಆಫ್ ಎ. ಪಿ. ಮತ್ತು ಮತ್ತೊಬ್ಬರು. (2011) 7 ಎಸ್. ಸಿ. ಸಿ. 616 : [2011] 9 ಎಸ್. ಸಿ. ಆರ್. 453; ಶಾಂತಿ ಕುಮಾರ್ ಆರ್. ಕ್ಯಾನ್ಜಿ ವರ್ಸಸ್ ಹೋಮ್ ವಿಮೆ ಕಂಪನಿ ಆಫ್ ನ್ಯೂಯಾರ್ಕ್ (1974) 2 ಎಸ್. ಸಿ. ಸಿ. 387: [1975] 1 ಎಸ್ಸಿಆರ್ 550; ರಾಜಸ್ಥಾನ ರಾಜ್ಯ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು. (1977) 3 ಎಸ್. ಸಿ. ಸಿ 592: [1978] 1 ಎಸ್. ಸಿ. ಆರ್. 1; ಶ್ರೀಮತಿ ಕೆ. ಪೊನ್ನಾಲಗು ಅಮ್ಮನಿ –ವಿರುದ್ಧ - ಮದ್ರಾಸ್ ರಾಜ್ಯ ಪ್ರತಿನಿಧಿಸಿದವರು ಕಂದಾಯ ಇಲಾಖೆಯ ಕಾರ್ಯದರ್ಶಿ, ಮದ್ರಾಸ್ ಮತ್ತು ಇತರರು. 66 ಲಾ ವೀಕ್ಲಿ 136-ಅವಲಂಬಿತವಾಗಿದೆ.

ಪ್ರಕರಣಗಳ ಕಾನೂನು ಉಲ್ಲೇಖ

[1971] 3 ಎಸ್. ಸಿ. ಆರ್ 247	ಪ್ಯಾರ 15ನ್ನು	ಅವಲಂಬಿಸಿದೆ.
[1974] 3 ಎಸ್. ಸಿ. ಆರ್ 152	ಪ್ಯಾರ 16ನ್ನು	ಅವಲಂಬಿಸಿದೆ.
[2002] 4 ಪೂರಕ.ಎಸ್. ಸಿ. ಆರ್ 43	ಪ್ಯಾರ 17ನ್ನು	ಅವಲಂಬಿಸಿದೆ.
[2011] 9 ಎಸ್ಸಿಆರ್ 453	ಪ್ಯಾರ 18ಅನ್ನು	ಅವಲಂಬಿಸಿದೆ.
[1975] 1 ಎಸ್. ಸಿ. ಆರ್ 550	ಪ್ಯಾರ 19ನ್ನು	ಅವಲಂಬಿಸಿದೆ.
[1978] 1 ಎಸ್. ಸಿ.ಆರ್ 1	ಪ್ಯಾರ 19ನ್ನು	ಅವಲಂಬಿಸಿದೆ.

ಸಿವಿಲ್ ಮೇಲ್ಮನವಿ ಅಧಿಕಾರವ್ಯಾಪ್ತಿ: 2020ರ ಸಿವಿಲ್ ಮೇಲ್ಮನವಿ ಸಂಖ್ಯೆಗಳು 2701 ರಿಂದ 2704.

ಕರ್ನಾಟಕ ಉಚ್ಚ ನ್ಯಾಯಾಲಯದ ಬೆಂಗಳೂರು ಪ್ರದಾನ ಪೀಠ 2017ನೆ ಇಸ್ವಿಯ ಆರ್. ಎಫ್. ಎ. ಸಂಖ್ಯೆ 1434,1435,1436 ಮತ್ತು 1775/2017 ರಲ್ಲಿ ದಿನಾಂಕ 21-02-2019 ರಂದು ನೀಡಿದ ತೀರ್ಪು ಮತ್ತು ಆದೇಶದ ಮೇಲೆ .

ಸಿದ್ಧಾರ್ಥ್ ಭಟ್ನಾಗರ್, ಶರಣಗೌಡಾ ಪಾಟೀಲ್, ಶ್ರೀಮತಿ ಸುಪ್ರಿತಾ ಶರಣಗೌಡ, ಮೆಸರ್ಸ್-ಲೀಗಲ್ ಅಸೋಸಿಯೇಟ್ಸ್, ಅಡ್ವೊಕೇಟ್ಸ್ ಮೇಲ್ಮನವಿದಾರರ ಪರವಾಗಿ.

ಗುರುಕೃಷ್ಣ ಕುಮಾರ್ ನಿಖಿಲ್ ನಯ್ಯರ್, ಹಿರಿಯ ವಕೀಲರು., ಅಕ್ಷಯ್ ಅಮೃತಾನ್ಶು, ಶಂಕರ್ ದೀವಟೆ, ದಿವ್ಯಾಂಶು ರಾಯ್, ಟಿ. ವಿ. ಎಸ್. ರಾಘವೇಂದ್ರ ಶ್ರೇಯಸ್, ಅಂಕಿತ್ ಕುಮಾರ್ ಲಾಲ್, ಶ್ರೀಮತಿ ಪ್ರಿಯಾಂಕಾ ದಾಸ್, ಸುಮಿತ್ ಉಪಾಧ್ಯಾಯ, ಶ್ರೀಮತಿ ಮೇಘಾ ಕರ್ನ್ವಾಲ್, ವಕೀಲರು- ಪ್ರತಿವಾದಿಗಳ ಪರವಾಗಿ.

ನ್ಯಾಯಾಲಯದ ತೀರ್ಪನ್ನು ಕೃಷ್ಣ ಮುರಾರಿ, ನ್ಯಾಯಾಧೀಶರು ಕೊಟ್ಟಿದ್ದಾರೆ.

1. 2017ರ ಆರ್. ಎಫ್. ಎ. ಸಂಖ್ಯೆ 1434,2017, 1435, 2017, 1436 ಮತ್ತು 1775/2017 ರಲ್ಲಿನ ಮೇಲ್ಮನವಿಗಳನ್ನು ಮೇಲ್ಮನವಿ ಸಲ್ಲಿಸಲು ಕೋರಿದ ಅನುಮತಿ ನಿರಾಕರಿಸಿ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರಿನ ಪ್ರಧಾನ ಪೀಠವು ಆರ್. ಎಫ್. ಎ. ಸಂಖ್ಯೆ 1434/2017 ರಲ್ಲಿ ದಿನಾಂಕ 21-02-2019 ರಲ್ಲಿ ನೀಡಿದ ಸಾಮಾನ್ಯ ತೀರ್ಪಿನ ವಿರುದ್ಧ ಸಲ್ಲಿಸಲಾಗಿದೆ.

2. ವಿವಾದದ ತೀರ್ಮಾನ ಮಾಡಲು ಅಗತ್ಯವಾದ ಸಂಗತಿಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಹೇಳಬಹುದುಃ

ವಿವಾದವು ಬೆಂಗಳೂರು ಉತ್ತರ ತಾಲ್ಲೂಕು ಜಕ್ಕೂರು ಗ್ರಾಮದ ಸರ್ವೇ ನಂಬರ್ 105/3 ರಲ್ಲಿ 37 ಗುಂಟೆಗಳ ವಿಸ್ತೀರ್ಣದ ಜಾಮೀನು, ಸರ್ವೇ ನಂಬರ್ 105/9 ರಲ್ಲಿ 34 ಗುಂಟೆಗಳ ವಿಸ್ತೀರ್ಣದ ಜಮೀನು ಮತ್ತು ಸರ್ವೇ ನಂಬರ್ 105/4B ರಲ್ಲಿ 20 ಗುಂಟೆಗಳ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದೆ. ವಿವಾದದಲ್ಲಿರುವ ಭೂಮಿಯ ಮಾಲೀಕರುರೆಂದು ದಾಖಲಾಗಿರುವ 5 ಮತ್ತು 6ನೇ ಸಂಖ್ಯೆಯ ಪ್ರತಿವಾದಿಗಳು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಮಿಕರ ಗೃಹ ನಿರ್ಮಾಣ ಸಹಕಾರಿ ಸಂಘ ಲಿಮಿಟೆಡ್ ಪರವಾಗಿ ವಿವಾದದಲ್ಲಿರುವ ಭೂಮಿಯನ್ನು ಮಾರಾಟ ಮಾಡಲು ಅಧಿಕಾರ ನೀಡಿ ನೋಂದಾಯಿತ ಮಾರಾಟ ಕರಾರು ಪತ್ರ

ಬರೆದುಕೊಟ್ಟಿದ್ದರು. ದಿನಾಂಕ 31-10-1989 ಮತ್ತು ದಿನಾಂಕ 05-08-1992 ರಲ್ಲಿ ನೊಂದಾಯಿತ ಮರಾಟ ಒಪ್ಪಂದ ಪತ್ರ ಬರೆದುಕೊಟ್ಟಿದ್ದಲ್ಲದೆ ಅವರು ಒಂದು ಜನರಲ್ ಪವರ್ ಆಫ್ ಅಟಾರ್ನಿಯನ್ನು ತಮ್ಮ ಪರವಾಗಿ ಮಾರಾಟ ವಹಿವಾಟು ನಡೆಸಲು ಅಧಿಕಾರ ನೀಡಿ ಪ್ರತಿವಾದಿ ಸಂಘದ ಪದಾಧಿಕಾರಿಗಳಿಗೆ ಬರೆದು ಕೊಟ್ಟರು. ಗಮನಿಸಬೇಕಾದ ಅಂಶವೆಂದರೆ ಮಾರಾಟಕ್ಕೆ ಅಗತ್ಯವಾದ ಎಲ್ಲಾ ಕ್ರಮ ಜರುಗಿಸಲು ಸಂಪೂರ್ಣ ಅಧಿಕಾರ ನೀಡಿ ಜನರಲ್ ಪವರ್ ಆಫ್ ಅಟಾರ್ನಿಯನ್ನು ಬರೆದುಕೊಡಲಾಗಿತ್ತು.

3. ಜನರಲ್ ಪವರ್ ಆಫ್ ಅಟಾರ್ನಿಯ ಆಧಾರದ ಮೇಲೆ, ವಿವಾದದಲ್ಲಿರುವ ಭೂಮಿಗೆ ಸಂಬಂಧಿಸಿದಂತೆ ಮಾರಾಟ ಪತ್ರಗಳನ್ನು ವಿವಿಧ ದಿನಾಂಕಗಳಲ್ಲಿ ಮೇಲ್ಮನವಿದಾರರ ಪರವಾಗಿ ಬರೆದುಕೊಡಲಾಗಿತ್ತು.

4. ಪ್ರತಿವಾದಿಗಳು-ವಾದಿಗಳು ಈ ಕೆಳಗಿನ ಪರಿಹಾರಗಳನ್ನು ಕೋರಿ 1529/2014, 1532/2014, 15342014, ಮತ್ತು 7758/2016 ನೇ ಸಂಖ್ಯೆಯ ನಾಲ್ಕು ಮೂಲ ದಾವೆಗಳನ್ನು ಸಲ್ಲಿಸಿ ಕೆಳಗೆ ಕಾಣಿಸಿದ ಪರಿಹಾರ ಕೋರಿದ್ದರು:-

ಎ) ಸಮಯವು ಒಪ್ಪಂದದ ಸಾರವಾಗಿರುವುದರಿಂದ ಮತ್ತು ಕಾಲಮಿತಿ ಅವಧಿಯನ್ನು ಮೀರಿ ಕಾಲಮಿತಿಯಿಂದ ನಿರ್ಬಂಧಿತವಾಗಿರುವುದರಿಂದ ದಿನಾಂಕ 05.08.1992 ರ ಮಾರಾಟದ ನೋಂದಾಯಿತ ಕರಾರು ಪತ್ರವನ್ನು ಶೂನ್ಯ, ಕಾನೂನುಬಾಹಿರ, ಜಾರಿಗೊಳಿಸಲಾಗದ ಮತ್ತು ನಿಷ್ಕ್ರಿಯ ಹಾಗು ಫಿರ್ಯಾದಿಗಳನ್ನು ಬಂದಿಸುವುದಿಲ್ಲ ಎಂದು ಘೋಷಿಸಬೇಕು.

ಬಿ) ಪ್ರತಿವಾದಿ ಸಂಖ್ಯೆ 1 ಮತ್ತು 2 ದಿನಾಂಕ 31-10-1989 ರಂದು ಪ್ರತಿವಾದಿ ಸಂಘಕ್ಕೆ ಬರೆದುಕೊಟ್ಟು ದಾಖಲೆ ಸಂಖ್ಯೆ 1194/92-93, ಪುಸ್ತಕ ಸಂಖ್ಯೆ I ಸಂಪುಟ27 ಪುಟಗಳು 86-88 ರಲ್ಲಿ ಯಲಹಂಕ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಆಗಿರುವ ಕ್ರಯದ ಕರಾರು ಪತ್ರ ಹಾಗೂ ನೋಂದಣಿ ಆಗಿಲ್ಲದ ದಿನಾಂಕ 23-05-1988 ರ ಕ್ರಯದ ಕರಾರು ಪತ್ರಗಳು ಕಾಲ ಮಿತಿಯಿಂದ ನಿರ್ಬಂದಿತವಾಗಿವೆ ಎಂದು ಘೋಷಿಸಿ ವಜಾ ಮಾಡಬೇಕು. ಪರ್ಯಾಯವಾಗಿ ಮೂರನೇ ಪ್ರತಿವಾದಿ

ಒಂದು ವೇಳೆ ಕ್ರಯದ ರದ್ದತಿ ಪತ್ರ ಬರೆದು ಕೊಡಲು ತಪ್ಪಿದರೆ ಈ ಗೌರವಾನ್ವಿತ ನ್ಯಾಯಾಲಯವು ನ್ಯಾಯಾಲಯದ ಆಯುಕ್ತರ ಮೂಲಕ ಕ್ರಯದ ರದ್ದತಿ ಪತ್ರ ಬರೆದುಕೊಡಬೇಕು.

ಸಿ) 3ನೇ ಪ್ರತಿವಾದಿಗೆ ಅಧಿಕಾರ ವ್ಯಾಪ್ತಿಯ ಸಬ್ ರಿಜಿಸ್ಟ್ರಾರ್ ಮುಂದೆ ನೋಂದಾಯಿತ ರದ್ದತಿ ಪತ್ರ ಬರೆದುಕೊಡಲು ನಿರ್ದೇಶಿಸಬೇಕು.

ಡಿ) ಪ್ರತಿವಾದಿಗಳು, ಅವರ ಏಜೆಂಟರು ಅಥವಾ ಅವರ ಪರವಾಗಿ ಕಾರ್ಯನಿರ್ವಹಿಸುವ ಯಾರೇ ಆದರೂ ಸರಿ ದಾವೆ ಆಸ್ತಿಯ ಸ್ವಾಧೀನದಲ್ಲಿ ಹಸ್ತಕ್ಷೇಪ ಮಾಡುವುದನ್ನು ತಡೆಯುವ ಶಾಶ್ವತ ತಡೆಯಾಜ್ಞೆ ನೀಡಿ ಐತೀರ್ಪು ಮತ್ತು ಡಿಕ್ರೀ ಹೊರಡಿಸುವುದು.

ಇ) ಪ್ರತಿವಾದಿಗಳು, ಅವರ ಏಜೆಂಟರು, ಸೇವಕರು, ಅಧಿಕಾರಿಗಳು, ನಿಯೋಜಿಸಿದವರು ಅಥವಾ ಅವರ ಪರವಾಗಿ ವರ್ತಿಸುವ ಅಥವಾ ಹಕ್ಕು ಸಾಧಿಸುವ ಯಾರಾದರೂ ಸರಿ ಆಸ್ತಿಯ ನೆಲಸಮ ಮಾಡುವುದು ಅಥವಾ ಯಾವುದೇ ರೀತಿಯಲ್ಲಿ ಆಸ್ತಿ ಮೇಲೆ ಪ್ರವೇಶಿಸುವುದು ಅಥವಾ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿರ್ಬಂಧಿಸಿ ತಡೆಯಾಜ್ಞೆ ನೀಡಬೇಕು.

ಎಫ್) ವಿಚಾರಣೆಯ ವೆಚ್ಚವನ್ನು ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸಬೇಕು.

ಜಿ) ಮುಂದುವರೆದು, ಈ ಗೌರವಾನ್ವಿತ ನ್ಯಾಯಾಲಯವು ನ್ಯಾಯ ಮತ್ತು ಸಮಾನತೆ ಹಿತದೃಷ್ಟಿಯಿಂದ ನ್ಯಾಯಾಲಯಕ್ಕೆ ಉಚಿತ ಅನಿಸಿದ ನ್ಯಾಯೋಚಿತ ಪರಿಹಾರ ಮತ್ತು ದಾವೆಯ ವೆಚ್ಚಗಳನ್ನು ನೀಡಲು ಆದೇಸಬೇಕು ಹಾಗು ಸಂದರ್ಭಕ್ಕಾನುಸಾರವಾಗಿ ಪರಿಗಣಿಸುವಂತಹ ಇತರ ನ್ಯಾಯಯುತ ಮತ್ತು ನ್ಯಾಯಸಮ್ಮತ ಪರಿಹಾರಗಳನ್ನು ನೀಡಬೇಕು

5. ದಾವೆ ಆಸ್ತಿಯು ಪೂರ್ವಜರ ಆಸ್ತಿ ಮತ್ತು ವಾದಿ ಸಹ-ಮಾಲೀಕರಾಗಿದ್ದಾರೆ ಮತ್ತು ಆದ್ದರಿಂದ ವಾದಿ ಹಿತಾಸಕ್ತಿಯನ್ನು ನಿರ್ಲಕ್ಷಿಸಿ ಮಾರಾಟದ ಒಪ್ಪಂದವನ್ನು ಬರೆದುಕೊಡಲು ಪ್ರತಿವಾದಿಗೆ ಯಾವುದೇ ಹಕ್ಕಿಲ್ಲ ಎಂಬ ಆರೋಪಗಳ ಮೇಲೆ

ದಾವೆಗಳನ್ನು ದಾಖಲಿಸಲಾಯಿತು. ಮಾರಾಟದ ಒಪ್ಪಂದ ಮಾರಾಟದ ವಹಿವಾಟಿನಲ್ಲಿ ಕೊನೆಗೊಳ್ಳದ ಕಾರಣ, ಅವು ಕಾಲಮಿತಿ ಕಾನೂನಿಡಿ ನಿರ್ಬಂಧಕ್ಕೊಳಪಡುತ್ತದೆ ಆದ್ದರಿಂದ ಅವುಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಸಹ ಮನವಿಮಾಡಿದ್ದಾರೆ. ಭೂ ದಾಖಲೆಗಳಲ್ಲಿ ನಮೂದಾಗಿರುವ. ಭೂ ಹಿಡುವಳಿದಾರರು ಬರೆದುಕೊಟ್ಟ ಮಾರಾಟ ಪತ್ರಗಳನ್ನು ದಾವೆಯಲ್ಲಿ ಪ್ರಶ್ನಿಸಲಾಗಿಲ್ಲ ಮತ್ತು ಅವು ವಿವಾದದ ವಿಷಯವಾಗಿರಲಿಲ್ಲ ಅಥವಾ ಅವುಗಳ ವಿಷಯದಲ್ಲಿ ಯಾವುದೇ ಪರಿಹಾರ ಕೋರಿಲ್ಲ ಎಂಬುದನ್ನು ಈ ಹಂತದಲ್ಲಿ ಉಲ್ಲೇಖಿಸುವುದು ಸೂಕ್ತವಾಗಬಹುದು.

6. ವಿಚಾರಣೆ ನ್ಯಾಯಾಲಯವು ತನ್ನ ದಿನಾಂಕದ 27.07.2016 ರ ತೀರ್ಪಿನ ಮೂಲಕ, ಈ ಕೆಳಗಿನಂತೆ ದಾವೆಯನ್ನು ಡಿಕ್ರೀ ಮಾಡಿತುಃ

"ಫಿರ್ಯಾದಿಗಳ ದಾವೆಯನ್ನು ಡಿಕ್ರಿ ಮಾಡಿ ಈ ಮೂಲಕ ಆದೇಶಿಸಲಾಗಿದೆ.

ಮುಂದುವರೆದು 30.10.1989 ಮತ್ತು 05.08.1992 ರ ದಿನಾಂಕದ ನೋಂದಾಯಿತ ಕರಾರುಪತ್ರಗಳು ಕಾಲಮಿತಿ ಅಧಿನಿಯಮದಡಿ ನಿರ್ಬಂಧಿತವಾಗಿದ್ದು ಫಿರ್ಯಾದಿಗಳನ್ನು ಬಂದಿಸುವುದಿಲ್ಲ ಎಂದು ಆದೇಶಿಸಲಾಗಿದೆ ಮತ್ತು ಡಿಕ್ರಿ ಮಾಡಲಾಗಿದೆ.

ಪ್ರತಿವಾದಿ ಸಂಘ ಅಥವಾ ಅವರ ಸಹಚರಾರು ವಾದಿಯ ಶಾಂತಿಯುತ ಸ್ವಾಧೀನ ಮತ್ತು ಅನುಭವದಲ್ಲಿ ಹಸ್ತಕ್ಷೇಪ ಮಾಡುವುದನ್ನು ಶಾಶ್ವತವಾಗಿ ನಿರ್ಬಂಧಿಸಿ ಡಿಕ್ರಿ ಮಾಡಿ ಆದೇಶಿಸಲಾಗಿದೆ.

ಪಕ್ಷಕಾರರು ತಮ್ಮ ತಮ್ಮ ದಾವೆಯ ವೆಚ್ಚಗಳನ್ನು ತಾವೇ ಭರಿಸಿಕೊಳ್ಳಲು ನಿರ್ದೇಶಿಸಿ ಆದೇಶಿಸಲಾಗಿದೆ ".

7. ದಾವೆಯ ವಿಚಾರಣೆಯು ಬಾಕಿ ಇರುವ ಸಮಯದಲ್ಲಿ, ಅಪೀಲುದಾರರು ಆದೇಶ 1 ನಿಯಮ 10 (2) ಸಿಪಿಸಿ ಅಡಿಯಲ್ಲಿ ಹೊಸ ಪಕ್ಷಕಾರ ರನ್ನು ದಾವೆಯಲ್ಲಿ ಸೇರಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು, ಅದನ್ನು ವಿಚಾರಣೆ ನ್ಯಾಯಾಲಯವು ವಜಾಗೊಳಿಸಿತು.ಈ ಆದೇಶವನ್ನು ಹೈಕೋರ್ಟ್ನ ಮುಂದೆ ರಿಟ್ ಅರ್ಜಿಯನ್ನು

ಸಲ್ಲಿಸುವ ಮೂಲಕ ಪ್ರಶ್ನಿಸಲಾಯಿತು, ಆ ರಿಟ್ ಅರ್ಜಿ ಸಲ್ಲಿಸುವುದಕ್ಕೆ ಮೊದಲೇ ದಾವೆ ತೀರ್ಮಾನವಾಗಿದ್ದ ಕಾರಣ ನಿಷ್ಫಲಗೊಂಡಿದೆಯೆಂದು ಅರ್ಜಿಯನ್ನು ವಜಾ ಮಾಡಲಾಯಿತು.

8. ವಿಚಾರಣೆ ನ್ಯಾಯಾಲಯದ ಐತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ ಮೇಲ್ಮನವಿದಾರರು ಆರ್. ಎಫ್. ಎ. ಸಂಖ್ಯೆ 1434/2017, 1435/2017 1436/2017 ಮತ್ತು 1775/2017 ಸಲ್ಲಿಸಿದರು. ಐತೀರ್ಪು ಮತ್ತು ಡಿಕ್ರಿ ವಿರುದ್ಧ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರುವ ಅರ್ಜಿಯನ್ನು ಮೇಲ್ಮನವಿಗಳೊಂದಿಗೆ ಸಲ್ಲಿಸಲಾಯಿತು.

9. ಈ ಮೇಲ್ಮನವಿಗಳಲ್ಲಿ, ಪ್ರಶ್ನೆಸಲಾದ ತೀರ್ಪು ಮತ್ತು ಆದೇಶದ ಮೂಲಕ, ಉಚ್ಚ ನ್ಯಾಯಾಲಯವು ಮೇಲ್ಮನವಿ ಸಲ್ಲಿಸಲು ಕೋರಿದ್ದ ಅನುಮತಿ ನಿರಾಕರಿಸಿ ಅರ್ಜಿಯನ್ನು ತಿರಸ್ಕರಿಸಿತು.

10. ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿ ಮೇಲ್ಮನವಿದಾರರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ತನ್ನ ಅಭಿಪ್ರಾಯ ತಿಳಿಸಿದೆ:-

"ವಿಚಾರಣೆ ನ್ಯಾಯಾಲಯವು ಬಹಳ ವಿಚಿತ್ರವಾದ ಘೋಷಣಾತ್ಮಕ ಪರಿಹಾರ ನೀಡಿದೆ ಎಂಬುದು ನಿಜ. ಇದು ನನ್ನ ಅಭಿಪ್ರಾಯದಲ್ಲಿ ನಿರ್ದಿಷ್ಟ ಕರ್ತವ್ಯ ಪೂರೈಸಲು ಕೋರಿ ಹೌಸಿಂಗ್ ಸೊಸೈಟಿಯಿಂದ ದಾವೆ ಹೂಡಿದ್ದರೆ, ವಾದಿಗಳು ರಕ್ಷಣಾತ್ಮಕವಾಗಿ ಇದನ್ನು ಮಂಡಿಸಬಹುದಿತ್ತು. ಅದು ಏನೇ ಇರಲಿ, ಎಲ್ಲಾ ಅರ್ಜಿದಾರರು/ ಮೇಲ್ಮನವಿದಾರರು ಜಮೀನಿನ ಮಾಲೀಕರು ಜಿ ಪಿ ಎ ಆಧಾರದ ಮೇಲೆ ಬರೆದುಕೊಡಲಾದ ಕ್ರಯಪತ್ರದ ಆಧಾರದಲ್ಲಿ ತಾವು ಸ್ವಾಧೀನದಲ್ಲಿರುವುದಾಗಿ ಕ್ಲೇಮು ಮಾಡಿದ್ದಾರೆ. ಅದರಲ್ಲಿ ಏನು ಹೇಳಲಾಗಿದೆ ಎಂದರೆ ಕ್ರಯದ ಕರಾರು ಪತ್ರಗಳನ್ನು ಸಂಘದ ಹೆಸರಿಗೆ ಬರೆದು ಕೊಡಲಾಗಿತ್ತು ಮತ್ತು ಜಿ ಪಿ ಎ ಯನ್ನು ಸಂಘದ ಪದಾಧಿಕಾರಿಗಳಾಗಿರುವ ಕೆಲವರ ಹೆಸರಿಗೆ ಬರೆದು ಕೊಡಲಾಗಿತ್ತು. ಇದು ಸರಿ ಇದ್ದರೆ ಅರ್ಜಿದಾರರು/ಮೇಲ್ಮನವಿದಾರರು ಭೂಮಿಯ

ಮಾಲೀಕರು ಬರೆದುಕೊಡಲಾದ ಮಾರಾಟ ಪತ್ರಗಳ ಆಧಾರದ ಮೇಲೆ ಪಡೆದುಕೊಂಡಿರುವಂತೆ ಕಾಣುತ್ತದೆ. ಕ್ರಯಪತ್ರಗಳನ್ನು ಜಿ ಪಿ ಎ ಮೂಲಕ ಅಧಿಕಾರ ಹೊಂದಿದ್ದವರು ಬರೆದುಕೊಟ್ಟಿದ್ದಾರೆ ಎಂಬುದು ವಾಸ್ತವ ಇರಬಹುದು, ಆದರೆ ವಾಸ್ತವದಲ್ಲಿ ಆ ಮಾರಾಟ ಪತ್ರಗಳನ್ನು ಭೂಮಿಯ ಮಾಲೀಕರುರು ಬರೆದುಕೊಟ್ಟಿದ್ದಾರೆ. ಆದ್ದರಿಂದ, ದಾವೆಯಲ್ಲಿ ವಿಚಾರಣೆ ನ್ಯಾಯಾಲಯವು ನೀಡಿದ ಘೋಷಣಾತ್ಮಕ ಪರಿಹಾರವು ಅರ್ಜಿದಾರರ/ಮೇಲ್ಮನವಿದಾರರ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಹೇಳಬಹುದು."

ವಿಚಾರಣಾ ನ್ಯಾಯಾಲಯವು ಮುಂದುವರೆದು ಈ ಕೆಳಕಂಡಂತೆ ಅಭಿವ್ಯಕ್ತಪಡಿಸಿದೆ

"ಅವರು ಖರೀದಿಸಿದ ಸೈಟು ಅವರ ವಶದಲ್ಲಿದ್ದರೆ, ಸ್ವತಂತ್ರ ದಾವೆಯನ್ನು ಸಲ್ಲಿಸುವ ಮೂಲಕ ಅವರು ತಮ್ಮ ಸ್ವಾಧೀನವನ್ನು ರಕ್ಷಿಸಿಕೊಳ್ಳಬೇಕು. ದಾವೆಯಲ್ಲಿನ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಮೂಲಕ ಅವರಿಗೆ ಪರಿಹಾರ ಸಿಗುತ್ತದೆ ಎಂದು ನಾನು ಭಾವಿಸುವುದಿಲ್ಲ ".

11. ಮೇಲ್ಮನವಿದಾರರ ಪರ ವಕೀಲರು ನಮ್ಮ ಮುಂದೆ ವಾದಿಸುತ್ತಾ, ಮೇಲ್ಮನವಿದಾರರ ಹಿತಾಸಕ್ತಿ ದಾವೆಯ ಸತ್ತಿನಲ್ಲಿ ನೇರವಾಗಿ ಒಳಗೊಂಡಿರುತ್ತದೆ ಎಂದು ಹೇಳಿ ಮಾರಾಟ ಪತ್ರಗಳ ಆಧಾರದ ಮೇಲೆ ಅವರು ಪ್ರಶ್ನಿತ ಸೈಟುಗಳ ಸಂಪೂರ್ಣ ಮಾಲೀಕರಾಗಿದ್ದಾರೆ ಮತ್ತು ಕೆಳನ್ಯಾಯಾಲಯವು ದಾವೆ ಕಾಲಮಿತಿ ಕಾಯಿದೆ ಅಡಿಯಲ್ಲಿ ಅನೂರ್ಜಿತಗೊಳ್ಳುವುದರಿಂದ ಶಾಶ್ವತ ತಡೆಯಾಜ್ಞೆಯ ಡಿಕ್ರಿ ನೀಡಿ ನ್ಯಾಯಾಯ ಐತೀರ್ಪು ನೀಡಿರುವುದರಿಂದ ವಾಸ್ತವವಾಗಿ ಅವರ ಹಿತಾಸಕ್ತಿಗಳ ಮೇಲೆ ಪರಿಣಾಮ ಬೀರುತ್ತದೆ ಏಕೆಂದರೆ ಅವರು ದಾವ ಆಸ್ಥಿಯ ಸ್ವಾಧೀನ ಹೊಂದಿದ್ದಾರೆ ಎಂದು ಹೇಳಿದ್ದಾರೆ

12. ಮತ್ತೊಂದೆಡೆ, ಪ್ರತಿವಾದಿಗಳ ಪರ ವಕೀಲರು ಬಲವಾದ ವಾದ ಮಂಡಿಸಿ ಮೇಲ್ಮನವಿದಾರರ ಕ್ಲೆಮು ದಾವಾ ಆಸ್ತಿಯ ಮಾಲೀಕರು ಜಿ ಪಿ ಎ ಬಲದ ಮೇಲೆ ಬರೆದುಕೊಟ್ಟರುವ ಕ್ರಯ ಪತ್ರಗಳ ಮೇಲೆ ಆಧರಿಸಿದೆ. ಆದರೆ ದಾವೆಯಲ್ಲಿ ಯಾವುದೇ ಕ್ರಯದ ಕರಾರು ಪತ್ರಗಳ ಬಗ್ಗೆ ನಮೂದಿಸಿಲ್ಲ ಹಾಗು ಕ್ರಯಪತ್ರಗಳಲ್ಲಿ

ಸಹ ಕ್ರಯದ ಕರಾರುಪತ್ರದ ಬಗ್ಗೆ ನಮೂದಿಲ್ಲ, ಆದ್ದರಿಂದ ಮೇಲ್ಮನವಿದಾರರ ಕ್ಲೇಮು ಅವರ ಪರ ಆಗಿರುವ ಕ್ರಯಪತ್ರಗಳ ಮೇಲೆ ಇದ್ದರೆ ಅದು ಬೇರೆಯದೇ ಆಗಿದೆ, ಮತ್ತು ವಿಚಾರಣಾ ನ್ಯಾಯಾಲಯದ ಡಿಕ್ರಿಯನ್ನು ಪ್ರಶ್ನೆ ಮಾಡಲು ಅವರಿಗೆ ಅಧಿಕಾರ ಇಲ್ಲ ಆದ್ದರಿಂದ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿರುವುದು ಸರಿಯಾಗಿದೆ ಎಂದು ವಾದಿಸಿದ್ದಾರೆ .

13. ಪಕ್ಷಕಾರರ ಪರ ಮಾನ್ಯ ವಕೀಲರು ಮಾಡಿದ ಪ್ರತಿಸ್ಪರ್ಧಾತ್ಮಕ ಮಂಡನೆಗಳನ್ನು ನಾವು ಪರಿಗಣಿಸಿದ್ದೇವೆ.

14. ಮೇಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ: ಮೇಲ್ಮನವಿದಾರರು ವಿಚಾರಣೆ ನ್ಯಾಯಾಲಯವು ನೀಡಿದ ಐತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸುವ ಹಕ್ಕನ್ನು ಹೊಂದಿದ್ದಾರೆಯೇ ಮತ್ತು ಮೇಲ್ಮನವಿ ಸಲ್ಲಿಸಲು ಅವರು ಕೇಳಿದ ಅನುಮತಿಯನ್ನು ತಿರಸ್ಕರಿಸಿದ ಉಚ್ಚ ನ್ಯಾಯಾಲಯದ ಆದೇಶವು ಸಮರ್ಥನೀಯವಾಗಿದೆಯೇ ಎಂಬುದು.

15. ಸಿವಿಲ್ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 96 ಮತ್ತು 100 ಗಳು ಅನುಕ್ರಮವಾಗಿ ಯಾವುದೇ ಮೂಲ ಐತೀರ್ಪು ಅಥವಾ ಮೇಲ್ಮನವಿಯಲ್ಲಿನ ಡಿಕ್ರಿಯ ಮೇಲೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡುತ್ತವೆ. ಮೇಲ್ಕಂಡ ಕಲಂಗಳು ಮೇಲ್ಮನವಿ ಸಲ್ಲಿಸಬಹುದಾದ ವ್ಯಕ್ತಿಗಳ ವರ್ಗೀಕರಣ ಮಾಡುವುದಿಲ್ಲ. ಆದಾಗ್ಯೂ, ಅಪರಿಚಿತ ವ್ಯಕ್ತಿಯು ತಾನು ಬಾಧಿತ ವ್ಯಕ್ತಿಗಳ ವರ್ಗಕ್ಕೆ ಸೇರಿದವನು ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾದಿಕೊಡದ ಹೊರತು ಯಾವುದೇ ವ್ಯವಹರಣೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಆತನಿಗೆ ಅನುಮತಿ ನೀಡಲಾಗುವುದಿಲ್ಲ ಎಂಬುದು ಇತ್ಯರ್ಥಗೊಂಡ ಕಾನೂನುಬದ್ಧ ಪ್ರತಿಪಾದನೆಯಾಗಿದೆ. ಒಂದು ಐತೀರ್ಪು ಮತ್ತು ಡಿಕ್ರಿಯು ವ್ಯವಹರಣೆಯಲ್ಲಿ ಪಕ್ಷಕಾರರಲ್ಲದ ವ್ಯಕ್ತಿ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಮನವರಿಕೆ ಮಾಡಿಕೊಟ್ಟ ಸಂದರ್ಭಗಳಲ್ಲಿ ಮಾತ್ರ, ಅಂತಹ ವ್ಯಕ್ತಿ ಮೇಲ್ಮನವಿ ನ್ಯಾಯಾಲಯದ ಅನುಮತಿಯೊಂದಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು.

ಶ್ರೀಮತಿ ಜತನ್ ಕುಮಾರ್ ಗೊಲ್ಛಾ - ವಿರುದ್ಧ - ಗೊಲ್ಛಾ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್. ಪ್ರಕರಣದಲ್ಲಿ ಈ ನ್ಯಾಯಾಲಯದ ಅಭಿಪ್ರಾಯದ ಉಲ್ಲೇಖವನ್ನು ಇಲ್ಲಿ ನೀಡಬಹುದು:

"ದಾವೆಯಲ್ಲಿ ಪಕ್ಷಕಾರರಲ್ಲದ ವ್ಯಕ್ತಿ ಮೇಲ್ಮನವಿ ನ್ಯಾಯಾಲಯದ ಅನುಮತಿಯೊಂದಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು ಮತ್ತು ತೀರ್ಪು ಆತನ ಮೇಲೆ ಪೂರ್ವಗ್ರಹದ ಪರಿಣಾಮ ಬೀರಿದರೆ ಅಂತಹ ಅನುಮತಿಯನ್ನು ನೀಡಬೇಕು ಎಂಬುದು ಸುಸ್ಥಾಪಿತವಾದ ಸಂಗತಿಯಾಗಿದೆ."

16. 'ಸ್ಟೇಟ್ ಆಫ್ ಪಂಜಾಬ್ & ಇತರರು - ವಿರುದ್ಧ - ಅಮರ್ಸಿಂಗ್ & ಮತ್ತೊಬ್ಬರು' ಪ್ರಕರಣದಲ್ಲಿ ಈ ನ್ಯಾಯಾಲಯವು ದಾವೆಯಲ್ಲಿ ಪಕ್ಷಕಾರರಲ್ಲದ ವ್ಯಕ್ತಿಯೊಬ್ಬರ ಮೇಲ್ಮನವಿಯ ಸಮರ್ಥನೀಯತೆಯ ಬಗ್ಗೆ ವ್ಯವಹರಿಸುವಾಗ ಈ ರೀತಿ ಗಮನಿಸಿದೆ:-

"ಮೊದಲನೆಯದಾಗಿ, ಸೆಕ್ಯೂರಿಟೀಸ್ ಇನ್ಶೂರೆನ್ಸ್ ಕಂ, [(1894) 2 Ch410] ನಲ್ಲಿ ಲಿಂಡ್ಲೆ, ಎಲ್. ಜೆ. ದಲ್ಲಿನ ಆದೇಶವನ್ನು ಅನುಸರಿಸಿ, ಅನೇಕ ಐತೀರ್ಪುಗಳು ಇದ್ದು ಅವುಗಳಲ್ಲಿ ವಿಧಿಸಿರುವ ನಿಯಮವೆಂದರೆ ಡಿಕ್ರಿ ಅಥವಾ ಆದೇಶಲ್ಲಿ ಒಳಪಡದ ವ್ಯಕ್ತಿಯೊಬ್ಬ ನ್ಯಾಯಾಲಯದ ಆದೇಶಕ್ಕೆ ಬದ್ಧರಾಗಿದ್ದರೆ ಅಥವಾ ಅದರಿಂದ ಬಾಧಿತರಾಗಿದ್ದರೆ ಅಥವಾ ಅದರಿಂದ ಪೂರ್ವಾಗ್ರಹ ಪೀಡಿತರಾಗಿದ್ದರೆ ಅಂತಹ ಐತೀರ್ಪು ಅಥವಾ ಡಿಕ್ರಿ ವಿರುದ್ಧ ಮೇಲ್ಮನವಿ ಸಲ್ಲಿಸಬಹುದು."

17. ಬಲ್ವೇವ್ ಸಿಂಗ್ ವರ್ಸಸ್ ಸುರಿಂದರ್ ಮೋಹನ್ ಶರ್ಮಾ ಮತ್ತು ಇತರರು ಪ್ರಕರಣದಲ್ಲಿ ಈ ನ್ಯಾಯಾಲಯವು ಹೆತ್ತಿ ಹಿಡಿದಿರುವ ಅಂಶವೆಂದರೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 96ರ ಅಡಿಯಲ್ಲಿ, ಐತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ ಮತ್ತು ಅತೃಪ್ತಿಗೊಂಡ ವ್ಯಕ್ತಿ ಮಾತ್ರ ಮೇಲ್ಮನವಿಯನ್ನು ಮುನ್ನಡೆಸಬಲ್ಲವನಾಗಿದ್ದಾನೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. 'ಬಾಧಿತ ವ್ಯಕ್ತಿ' ಪರಿಕಲ್ಪನೆಯೊಂದಿಗೆ ವ್ಯವಹರಿಸುವಾಗ, ಪುಟ 15 ರಲ್ಲಿ ಈ ಕೆಳಗಿನಂತೆ ಅಭಿಪ್ರಾಯ ಪಡಲಾಗಿದೆಃ

"ಮೇಲ್ಮನವಿಯನ್ನು ಸಲ್ಲಿಸಲು ಬಾಧಿತ ವ್ಯಕ್ತಿ ಎಂದರೆ ಪ್ರಶ್ನೆ ಮಾಡಬೇಕೆಂದಿರುವ ಐತೀರ್ಪು ಮತ್ತು ಡಿಕ್ರಿಯ ಕಾರಣದಿಂದ ತೊಂದರೆಗೊಳಗಾದ ವ್ಯಕ್ತಿಯಾಗಿರಬೇಕು. "

18. ಎ. ಸುಭಾಷ್ ಬಾಬು - ವಿರುದ್ಧ -.ಸ್ಟೇಟ್ ಆಫ್ ಎ. ಪಿ. ಮತ್ತು ಮತ್ತೊಬ್ಬರು ಪ್ರಕರಣದಲ್ಲಿ, ಈ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿದೆ :

'ತೊಂದರೆಗೊಳಗಾದ ವ್ಯಕ್ತಿ' ಎಂಬ ಅಭಿವ್ಯಕ್ತಿಯು ಸ್ಥಿತಿಸ್ಥಾಪಕ ಮತ್ತು ಅಸ್ಪಷ್ಟವಾದ ಪರಿಕಲ್ಪನೆಯನ್ನು ಸೂಚಿಸುತ್ತದೆ. ಕಟ್ಟುನಿಟ್ಟಾದ, ನಿಖರವಾದ ಮತ್ತು ಸಮಗ್ರವಾದ ವ್ಯಾಖ್ಯಾನದ ಮಿತಿಗಳನ್ನು ಸೀಮಿತಗೊಳಿಸಲು ಸಾಧ್ಯವಿಲ್ಲ. ಅದರ ವ್ಯಾಪ್ತಿ ಮತ್ತು ಅರ್ಥವು ಉಲ್ಲಂಘನೆಯಾಗಿದೆ ಎಂದು ಆರೋಪಿಸಲಾದ ಶಾಸನದ ವಿಷಯ ಮತ್ತು ಉದ್ದೇಶ, ಪ್ರಕರಣದ ನಿರ್ದಿಷ್ಟ ಸಂದರ್ಭಗಳು, ದೂರುದಾರರ ಹಿತಾಸಕ್ತಿಯ ಸ್ವರೂಪ ಮತ್ತು ವ್ಯಾಪ್ತಿ ಮತ್ತು ಅವನು ಅನುಭವಿಸಿದ ಪೂರ್ವಾಗ್ರಹ ಅಥವಾ ತೊಂದರೆಗಳ ಸ್ವರೂಪ ಮತ್ತು ವ್ಯಾಪ್ತಿಯಂತಹ ವೈವಿಧ್ಯಮಯ, ಬದಲಾಗುವ ಅಂಶಗಳನ್ನು ಅವಲಂಬಿಸಿರುತ್ತದೆ.

19. 'ಬಾಧಿತ ವ್ಯಕ್ತಿ' ಎಂಬ ಅಭಿವ್ಯಕ್ತಿಯಲ್ಲಿ ಮಾನಸಿಕ ಅಥವಾ ಕಾಲ್ಪನಿಕ ಗಾಯದಿಂದ ಬಳಲುತ್ತಿರುವ ವ್ಯಕ್ತಿ ಒಳಗೊಂಡಿರುವುದಿಲ್ಲ; ಆದ್ದರಿಂದ, 'ಬಾಧಿತ ವ್ಯಕ್ತಿ' ಎಂದರೆ ಅವಶ್ಯಕವಾಗಿ ತನ್ನ ಹಕ್ಕು ಅಥವಾ ಹಿತಾಸಕ್ತಿಗೆ ಸಂಬಂಧಿಸಿದಂತೆ ಪ್ರತಿಕೂಲ ಪರಿಣಾಮಕ್ಕೆ ಅಥವಾ ಅಪಾಯಕ್ಕೆ ಒಳಗಾದ ವ್ಯಕ್ತಿಯಾಗಿರಬೇಕು (ಶಾಂತಿ ಕುಮಾರ್ ಆರ್. ಕ್ಯಾನ್ಜಿ - ವಿರುದ್ಧ - ಹೋಮ್ ಇನ್ಶೂರೆನ್ಸ್ ಕಂಪನಿ ಆಫ್ ನ್ಯೂಯಾರ್ಕ್ ಅಂಡ್ ಸ್ಟೇಟ್ ಆಫ್ ರಾಜಸ್ಥಾನ & ಇತರರು - ವಿರುದ್ಧ - ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು(6).

20. ಶ್ರೀಮತಿ ಕೆ. ಪೊನ್ನಾಲಗು ಅಮ್ಮನಿ - ವಿರುದ್ಧ - ಮದ್ರಾಸ್ ರಾಜ್ಯ, ಪ್ರತಿನಿಧಿಸಿದವರು -ಕಂದಾಯ ಇಲಾಖೆಯ ಕಾರ್ಯದರ್ಶಿ, ಮದ್ರಾಸ್ ಮತ್ತು ಇತರರು, ಪ್ರಕರಣದಲ್ಲಿ ಈ ನ್ಯಾಯಾಲಯವು ಐತೀರ್ಪು ಅಥವಾ ಡಿಕ್ರಿ ವಿರುದ್ಧ ಪಕ್ಷಕಾರ ಆಗಿಲ್ಲದ ವ್ಯಕ್ತಿಗೆ ಮೇಲ್ಮನವಿ ಸಲ್ಲಿಸಲು ಅನುಮತಿಯನ್ನು ಯಾವ

ಸಂದರ್ಭದಲ್ಲಿ ನೀಡುವುದು ಸೂಕ್ತ ಎಂಬುದನ್ನು ಕಂಡುಹಿಡಿಯಲು ಈ ಕೆಳಕಂಡಂತೆ ಪರೀಕ್ಷೆಯನ್ನು ನಿಗದಿಪಡಿಸಿದೆಃ

"ಈಗ, ಅಂತಹ ವ್ಯವಹರಣೆಗಳಲ್ಲಿ ಐತೀರ್ಪು ಅಥವಾ ಡಿಕ್ರಿ ವಿರುದ್ಧದ ನಡಾವಳಿಯಲ್ಲಿ ಪಕ್ಷಕಾರರಲ್ಲದ ವ್ಯಕ್ತಿಗೆ ಮೇಲ್ಮನವಿ ಸಲ್ಲಿಸಲು ಯಾವಾಗ ಅನುಮತಿ ನೀಡುವುದು ಸೂಕ್ತ ಎಂದು ಕಂಡುಹಿಡಿಯಲು ಯಾವ ಪರೀಕ್ಷೆ ಇದೆ? ಐತೀರ್ಪು ಅಥವಾ ಡಿಕ್ರಿಯಿಂದ ದೂರದಿಂದ ಅಥವಾ ಪರೋಕ್ಷ ರೀತಿಯಲ್ಲಿ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಪ್ರತಿಯೊಬ್ಬ ವ್ಯಕ್ತಿಗೂ ಮೇಲ್ಮನವಿ ಸಲ್ಲಿಸಲು ಅನುಮತಿ ನೀಡುವುದು ಸೂಕ್ತವಲ್ಲ ಎಂದು ನಾವು ಭಾವಿಸುತ್ತೇವೆ. ನಡಾವಳಿಯಲ್ಲಿ ಪಕ್ಷಕಾರರಲ್ಲದಿದ್ದರೂ, ವ್ಯವಹರಣೆಯಲ್ಲಿನ ಐತೀರ್ಪು ಅಥವಾ ಡಿಕ್ರಿಗೆ ಬದ್ಧರಾಗುವ ವ್ಯಕ್ತಿಗಳಿಗೆ, ಅವರು ನಡಾವಳಿಯಲ್ಲಿ ಪಕ್ಷಕಾರರಾಗಿ ಇರದಿದ್ದರೂ ಹಾಗು ಬೇರೆ ನಡಾವಳಿಯಲ್ಲಿ ಐತೀರ್ಪಿನ ಸರಿ ತಪ್ಪನ್ನು ಪ್ರಶ್ನಿಸಲು ತಡೆ ಇರುವ ವ್ಯಕ್ತಿಗಳಿಗೆ ಮೇಲ್ಮನವಿ ಸಲ್ಲಿಸಲು ಸಾಮಾನ್ಯವಾಗಿ ಅನುಮತಿ ನೀಡಬೇಕು ಎಂದು ನಾವು ಭಾವಿಸುತ್ತೇವೆ."

21. ಮೇಲಿನ ಪರೀಕ್ಷೆಗಳನ್ನು ಅನ್ವಯಿಸಿ, ಮೇಲ್ಮನವಿದಾರರನ್ನು 'ಬಾಧಿತ ವ್ಯಕ್ತಿಗಳು' ಎಂದು ಹೇಲುವುದಾಗಲಿ ಅಥವಾ ವಿಚಾರಣೆ ನ್ಯಾಯಾಲಯದ ಐತೀರ್ಪು ಮತ್ತು ಡಿಕ್ರಿಗೆ ಯಾವುದಾದರು ರೀತಿಯಲ್ಲಿ ಬದ್ಧರಾಗಿದ್ದಾರೆಂದು ಹೇಲಾಲಾಗುವುದಿಲ್ಲ ಎಂದು ನಾವು ನಿರ್ದಿಷ್ಟ ಅಭಿಪ್ರಾಯವನ್ನು ಹೊಂದಿದ್ದೇವೆ. ದಾವೆಯಲ್ಲಿ ಕೇಳಲಾದ ಪರಿಹಾರವೆಂದರೆ ಮಾರಾಟದ ಒಪ್ಪಂದ ಪತ್ರವನ್ನು ರದ್ದುಗೊಳಿಸುವುದು. ಮತ್ತೊಂದೆಡೆ, ಮೇಲ್ಮನವಿದಾರರು ಕ್ಲೈಮ್ ಮಾಡುತ್ತಿರುವ ಮಾರಾಟ ಪತ್ರಗಳನ್ನು ಜನರಲ್ ಪವರ್ ಆಫ್ ಅಟಾರ್ನಿಯ ಆಧಾರದ ಮೇಲೆ ಬರೆದುಕೊಡಲಾಗಿತ್ತು ಮತ್ತು ಅದು ದಾವೆಯಲ್ಲಿ ಪ್ರಶ್ನಿಸಿರುವ ಮಾರಾಟ ಒಪ್ಪಂದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರಲಿಲ್ಲ. ವಿಚಾರಣೆ ನ್ಯಾಯಾಲಯದ ಐತೀರ್ಪು ಮತ್ತು ಡಿಕ್ರಿಯು ಯಾವುದೇ ಅರ್ಥದಲ್ಲಿಯೂ ಸರ್ವರಿಗೂ ಅನ್ವಯಿಸುವ ತೀರ್ಪಲ್ಲ ಮತ್ತು ಅದು ದಾವೆಯ ವಾದಿಗಳು ಮತ್ತು

ಪ್ರತಿವಾದಿಗಳ ಮೇಲೆ ಮಾತ್ರ ಅನ್ವಯವಾಗುತ್ತದೆ ಮತ್ತು ಮೇಲ್ಮನವಿದಾರರಿಗೆ ಅನ್ವಯಿಸುವುದಿಲ್ಲ.

22. ನಮ್ಮ ಮುಂದೆ ಹಾಗು ಉಚ್ಚ ನ್ಯಾಯಾಲಯದ ಮುಂದೆ ಪ್ರಬಲವಾಗಿ ಮಂಡಿಸಿದ ವಾದದಲ್ಲಿ ವಿಚಾರಣೆ ನ್ಯಾಯಾಲಯದ ಐತೀರ್ಪು ಮತ್ತು ಡಿಕ್ರಿ ಮೇಲ್ಮನವಿದಾರರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದು . ವಿಚಾರಣೆ ನ್ಯಾಯಾಲಯವು ನೀಡಿದ ಐತೀರ್ಪು ಮತ್ತು ಡಿಕ್ರಿ ಅವರ ಮೇಲೆ ಹೇಗೆ ಪ್ರತಿಕೂಲ ಅಥವಾ ಪೂರ್ವಗ್ರಹದಿಂದ ಕೂಡಿದ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸಲು ಮೇಲ್ಮನವಿದಾರರು ಯಾವುದೇ ಸಾಕ್ಷ ಹಾಜರುಪಡಿಸಲು ವಿಫಲರಾಗಿದ್ದಾರೆ. ಐತೀರ್ಪು ಮೂಲಕ ಮೇಲ್ಮನವಿದಾರರು ಪೂರ್ವಗ್ರಹದಿಂದ ಪ್ರಭಾವಿತರಾಗಿದ್ದಾರೆ ಎಂದು ಹೇಳಿದರಷ್ಟೇ ಸಾಕಾಗುವುದಿಲ್ಲ .ಈ ಐತೀರ್ಪು ಮೇಲ್ಮನವಿದಾರರ ಕಾನೂನುಬದ್ಧ ಹಕ್ಕುಗಳು ಮೇಲೆ ಪರಿಣಾಮ ಬೀರುತ್ತದೆ ಮತ್ತು ಅದನ್ನು ಕಾರ್ಯಗತಗೊಳಿಸಿದಾಗ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸಬೇಕು. ಡಿಕ್ರಿ ನೀಡಿರುವ ದಾವೆಯು ಮಾರಾಟದ ಒಪ್ಪಂದಕ್ಕೆ ಸಂಬಂಧಿಸಿದಂತೆ ಕೋರಿದ ಘೋಷಣೆಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ಪ್ರಕರಣದ ಸಂಗತಿಗಳು ಸ್ಪಷ್ಟವಾಗಿ ತೋರಿಸುತ್ತವೆ. ಪ್ರತಿವಾದಿ ಸಂಘ ಅಥವಾ ಅದರ ಅಧಿಕಾರಿಗಳು ಅಥವಾ ನಿಯೋಜಕರ ವಿರುದ್ಧ ಮಾತ್ರ ತಡೆಯಾಜ್ಞೆ ಕೋರಲಾಗಿತ್ತು . ಜನರಲ್ ಪವರ್ ಆಫ್ ಅಟಾರ್ನಿ ಹೊಂದಿದ್ದವರು ಮೇಲ್ಮನವಿದಾರರ ಪರವಾಗಿ ಬರೆದುಕೊಟ್ಟ ಮಾರಾಟ ಪತ್ರದ ಬಗ್ಗೆಯಾಗಲಿ ಅಥವಾ ವಿಚಾರಣೆ ನ್ಯಾಯಾಲಯದ ಐತೀರ್ಪು ಮತ್ತು ಡಿಕ್ರಿ ಬಗ್ಗೆಯಾಗಲಿ ವಾದಪತ್ರದಲ್ಲಿ ಅಥವಾ ಪ್ರಕರಣದ ಪ್ರಕ್ರಿಯೆಗಳಲ್ಲಿ ಎಲ್ಲಿಯೂ ಒಂದು ಪಿಸುಮಾತನ್ನೂ ಸಹ ಆಡಿಲ್ಲ.

23. ಆದುದರಿಂದ ಮೇಲ್ಮನವಿದಾರರು ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು, ಅರ್ಹತೆ ನೀಡುವ 'ಬಾಧಿತ ವ್ಯಕ್ತಿ' ಎಂಬ ಅಭಿವ್ಯಕ್ತಿಯ ವ್ಯಾಪ್ತಿಗೆ ತಾವು ಬರುತ್ತೇವೆ ಹಾಗು ಪ್ರಶ್ನಿತ ಐತೀರ್ಪುದಿಂದ ತಾವು ಪೂರ್ವಾಗ್ರಹದಿಂದ ಅಥವಾ ಪ್ರತಿಕೂಲವಾಗಿ ಬಾಧಿತರಾಗಿದ್ದೇವೆ ಅಥವಾ ತಮ್ಮ ಯಾವುದಾದರು

ಕಾನೂನುಬದ್ಧ ಹಕ್ಕುಗಳು ಅಪಾಯಕ್ಕೆ ಸಿಲುಕಿವೆ ಎಂಬುದನ್ನು ತೋರಿಸುವಲ್ಲಿ ವಿಫಲರಾಗಿದ್ದಾರೆ.

24. ವಾಸ್ತವಾಂಶಗಳು ಮತ್ತು ಚರ್ಚೆಗಳನ್ನು ಗಮನಿಸಿದ ನಂತರ ನಮಗೆ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿ ಮೇಲ್ಮನವಿದಾರರು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ ಉಚ್ಚ ನ್ಯಾಯಾಲಯದ ಐತೀರ್ಪಿನಲ್ಲಿ ಯಾವುದೇ ದುರ್ಬಲತೆ ಕಾಣುವುದಿಲ್ಲ. ಅದರಂತೆ, ಮೇಲ್ಮನವಿಗಳನ್ನು ವಜಾಗೊಳಿಸಲಾಗಿದೆ. ಆದಾಗ್ಯೂ, ನಾವು ಪಕ್ಷಕಾರರನ್ನು ಅವರವರ ವೆಚ್ಚಗಳನ್ನು ಅವರೇ ಭರಿಸಿಕೊಳ್ಳಲು ಬಿಡುತ್ತೇವೆ.